

# ಎಂದೂ ಸದ್ದು ಮಾಡದ ಘಂಟೆ!

■ ವಿನಯ್‌ಕುಮಾರ್ ಬಿ.ಎಚ್.

ರಷ್ಯಾದಲ್ಲಿನ 'ರಾಯಲ್ ಬೆಲ್' ವಿಶ್ವದ ಅತಿ ದೊಡ್ಡ ಘಂಟೆ ಎನ್ನುವ ಪ್ರಸಿದ್ಧಿ ಹೊಂದಿದೆ. ಆದರ ತೂಕ 202 ಟನ್.



ರಷ್ಯಾದಲ್ಲಿ 18ನೇ ಶತಮಾನದಲ್ಲಿ ಪ್ರಸಿದ್ಧವಾಗಿದ್ದ ಎರಕ ಹೊಯ್ಯುವಿಕೆ ತಂತ್ರಜ್ಞಾನದಿಂದ ರೂಪುಗೊಂಡಿರುವ ಅತ್ಯುತ್ತಮ ಕಲಾಕೃತಿಯೇ ದೊಡ್ಡ ಘಂಟೆ (**Tsar Bell, Royal bell**). ಇದು 'ಇವಾನ್ ದಿ ಗ್ರೇಟ್ ಬೆಲ್ ಟವರ್' ಹಾಗೂ 'ಕ್ರೆಮ್ಲಿನ್ ಗೋಡೆ'ಯ ನಡುವೆ ಕಲ್ಲಿನ ಅಡಿಪಾಯದ ಮೇಲೆ ನಿಂತಿದೆ.

ಪೀಟರ್ ದಿ ಗ್ರೇಟ್ ಸಹೋದರನ ಮಗಳಾದ ಅನ್ನಾ ಇವಾನೋವ್ನಾ ಚಕ್ರವರ್ತಿನಿಯ ಅಣತಿಯಂತೆ 1733–1735ರ ಅವಧಿಯಲ್ಲಿ ಇದನ್ನು ಎರಕ ಹೊಯ್ದು ರೂಪಿಸಲಾಯಿತು. ಈ ಘಂಟೆಯನ್ನು ತಯಾರಿಸಿದ್ದು, ಎರಕ ಹೊಯ್ಯುವಿಕೆಯ ಮಾಸ್ಟರ್ ಎಂದೇ ಹೆಸರಾಗಿದ್ದ ಇವಾನ್ ಮೋಟೋರಿನ್ ಹಾಗೂ ಆತನ ಮಗ ಮೈಕೆಲ್.

ಕಂಚಿನಿಂದ ತಯಾರಾದ ಈ ಗಂಟೆಯು 6.14 ಮೀಟರ್ (20.1 ಅಡಿ) ಎತ್ತರ, 6.6 ಮೀಟರ್ (22 ಅಡಿ) ಸುತ್ತಳತೆಯನ್ನು ಹೊಂದಿದೆ. ಸುಮಾರು 202 ಟನ್ ತೂಕವುಳ್ಳ ಈ ಕಲಾಕೃತಿ ಇಂದಿಗೂ ಇಡೀ ವಿಶ್ವದಲ್ಲೇ ಅತ್ಯಂತ ದೊಡ್ಡ ಘಂಟೆ ಎನ್ನುವ ಪ್ರಸಿದ್ಧಿ ಹೊಂದಿದೆ.

ಅಚ್ಚು ಮಾಡುವ ಗುಣಿಯಲ್ಲಿದ್ದಾಗಲೇ ಇದನ್ನು 1735ರಲ್ಲಿ ಕೊನೆಯ ಬಾರಿಗೆ ಎರಕ ಹೊಯ್ಯಲಾಯಿತು. ಇದನ್ನು ಯಾವ ಕಾಲಕ್ಕೂ ತೂಗುಹಾಕಲು ಅಥವಾ ಬಾರಿಸಲು ಆಗಲೇ ಇಲ್ಲ. ಯಾಕೆಂದರೆ 1737ರ ಮೇ ತಿಂಗಳಲ್ಲಿ ಭಯಂಕರವಾದ ಬೆಂಕಿಯು ಮಾಸ್ಕೋದಲ್ಲಿ ಹರಡಿ, ಕ್ರೆಮ್ಲಿನ್ ಕಟ್ಟಡಕ್ಕೂ ತಗಲಿಕೊಂಡಿತು. ಬೆಂಕಿಯ ಕೆನ್ನಾಲಿಗೆಯು ಘಂಟೆಯ ಸುತ್ತಲಿನ ಅಟ್ಟಣಿಗೂ ವ್ಯಾಪಿಸಿದಾಗ ಅದರ ತೀವ್ರತೆಯನ್ನು ಕಡಿಮೆ ಮಾಡಲು ನೀರನ್ನು ಸುರಿಯಲಾಯಿತು. ಆ ನೀರು ಘಂಟೆಯ ಮೇಲೂ ಬಿತ್ತು. ಉಷ್ಣತೆಯಲ್ಲಾದ ವ್ಯತ್ಯಾಸದಿಂದ ಘಂಟೆಯು ಮುರಿದು ಹೋಯಿತು. ಆಗ ಚೂರಾಗಿ ಸಿಡಿದು ಬಿದ್ದಿರುವ ತುಂಡು ಸುಮಾರು 11.5 ಟನ್‌ನಷ್ಟಿದೆ.

ಅಚ್ಚು ಮಾಡುವ ಗುಣಿಯಲ್ಲಿದ್ದ ಘಂಟೆಯನ್ನು 1836ರಲ್ಲಿ ಹೊರತೆಗೆದು ಕಲ್ಲಿನಿಂದ ಮಾಡಿದ ಆಧಾರ ಪೀಠದಲ್ಲಿ ನಿಲ್ಲಿಸಲಾಯಿತು. ಬೃಹತ್ ಘಂಟೆಯ ಮೇಲೆ ಸ್ಸಾರ್ ಅಲೆಕ್ಸಿ ಮೈಕೆಲೋವಿಚ್, ಅನ್ನಾ ಇವಾನೋವ್ನಾ ಮಹಾರಾಣಿಯ ಪ್ರತಿಕೃತಿಗಳೊಂದಿಗೆ ದೇವತೆಗಳ, ಧರ್ಮಗುರುಗಳ, ಅಲಂಕಾರಿಕ ಸಸ್ಯಗಳ ಚಿತ್ರಕೆತ್ತನೆಯಿದೆ. ಜೊತೆಗೆ ಘಂಟೆಯ ಕಥೆಯನ್ನೂ ಇದರಲ್ಲಿ ಕೆತ್ತಲಾಗಿದೆ. ■